702 (1131) ಶ್ರೀ ಪಾಟೀಲ್ ಡಿ ಆರ್ (ಗದಗ) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ಜಿಲ್ಲೆಯಲ್ಲಿರುವ ಒಟ್ಟು ಕುಟುಂಬಗಳೆಷ್ಟು, ಆ ಪೈಕಿ ಬಡ ಕುಟುಂಬಗಳೆಷ್ಟು , (ನಗರ ಪ್ರದೇಶ, ಗ್ರಾಮೀಣ ಪ್ರದೇಶವಾರು ಮಾಹಿತಿ ನೀಡುವುದು) ,

ಆ) ಇವರಿಗೆ ಬಿ ಪಿ ಎಲ್ ಪಡಿತರ ಚೀಟಿ ವಿತರಿಸಲಾಗಿದೆಯೇ , (ಜಿಲ್ಲಾವಾರು, ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶವಾರು ವಿವರ ನೀಡುವುದು) ,

ಇ) ಇದನ್ನು ವಿತರಿಸದ ಬಡ ಕುಟುಂಬಗಳಿಗೆ ರೇಷನ್ ಕಾರ್ಡ್ ವಿತರಿಸಲು ಬೇಕಾಗುವ ಸಮಯವೆಷ್ಟು ,

ಈ) ಈ ಕಾರ್ಯ ವಿಳಂಬವಾಗಲು ಕಾರಣಗಳೇನು ,

ಉ) ಬಿ ಪಿ ಎಲ್ ಕಾರ್ಡುದಾರರಿಗೆ ಸರ್ಕಾರ ಕೊಡುತ್ತಿರುವ ಸಹಾಯ ಧನ ಎಷ್ಟು ,

ಊ) ನಕಲಿ ಪಡಿತರ ಚೀಟಿಯನ್ನು ತಡೆಯಲು ಸರ್ಕಾರದ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಜಿಲ್ಲಾವಾರು ಕುಟುಂಬಗಳ ವಿವರಗಳು ಕೆಳಕಂಡಂತಿರುತ್ತದೆ -

ಕ್ರ ಸಂ	ಜಿಲ್ಲೆಯ ಹೆಸರು	2001ನೇ ಜನಗಣತಿ ಪ್ರಕಾರ ಕುಟುಂಬಗಳ ಸಂಖ್ಯೆ	ಗುರುತಿಸಲಾಗಿರುವ ಬಿಪಿಎಲ್ (ಅನ್ನಪೂರ್ಣ,ಅಂತ್ಯೋದಯ,ಅಕ್ಷಯ ಸೇರಿ) ಕುಟುಂಬಗಳ ಸಂಖ್ಯೆ (ದಿ·5-9-05ರ ಸರ್ವೆ ಮಾಹಿತಿಯಂತೆ)	
			ನಗರ ಪ್ರದೇಶ	ಗ್ರಾಮಾಂತರ ಪ್ರದೇಶ
1	ಬಾಗಲಕೋಟೆ	293645	61227	155104
2	ಬೆಂಗಳೂರು ಅಪ	1080018	219730	0
3	ಬೆಂಗಳೂರು (ಗ್ರಾ)	390708	37471	240045
4	ಬೆಂಗಳೂರು(ನ)	380679	8517	147748
5	ಬೆಳಗಾಂ	789164	83353	464527
6	ಬಳ್ಳಾರಿ	373034	69414	167274
7	ಬೀದರ್	252250	36639	147637
8	ಬಿಜಾಪುರ	317379	47228	175167
9	ಚಾಮರಾಜನಗರ	203430	16711	156780
10	ಚಿಕ್ಕಮಗಳೂರು	246110	22205	136156
11	ಚಿತ್ರದುರ್ಗ	296718	34998	192924
12	ದಕ್ಷಿಣ ಕನ್ನಡ	362216	28975	123081
13	ದಾವಣಗೆರೆ	337484	60153	170089
14	ಧಾರವಾಡ	297494	89695	110050
15	ಗದಗ್	181500	28432	91405
16	ಗುಲ್ಬರ್ಗಾ	536056	91870	310569
17	ಹಾಸನ	364806	38017	257196
18	ಹಾವೇರಿ	260283	21252	148444
19	ಕೊಡಗು	130110	3816	81271

20	ಕೋಲಾರ	504185	57020	313558
21	ಕೊಪ್ಪಳ	210888	17827	117042
22	ಮಂಡ್ಯ	373672	99975	176474
23	ಮೈಸೂರು	545741	89790	293759
24	ರಾಯಚೂರು	297775	34637	155536
25	ಶಿವಮೊಗ್ಗ	341224	59584	142802
26	ತುಮಕೂರು	550473	30562	341420
27	ಉಡುಪಿ	211454	12250	93978
28	ಉತ್ತರ ಕನ್ನಡ	273422	26612	142436
	ಒಟ್ಟು	10401918	1427960	5052472

ಗ್ರಾಮಾಂತರ ಪ್ರದೇಶದಲ್ಲಿ 12,000 ರೂ ಗಳ ಆದಾಯ ಮಿತಿಯನ್ನು ಹೊಂದಿರುವ ಕುಟುಂಬಗಳನ್ನು ಹಾಗೂ ಪಟ್ಟಣ ಪ್ರದೇಶದಲ್ಲಿ 17,000 ರೂ ಗಳ ವಾರ್ಷಿಕ ಆದಾಯ ಹೊಂದಿರುವ ಕುಟುಂಬಗಳನ್ನು ಅರ್ಹತೆಗೆ ಅನುಗುಣವಾಗಿ ಬಿಪಿಎಲ್ ಪಡಿತರ ಚೀಟಿ ನೀಡಲು ಗುರುತಿಸಲಾಗಿರುತ್ತದೆ

(ಳ) ಹೊದು ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ಶಾಶ್ವತಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ

ದಿನಾಂಕ 5-2-2007 ರಂತೆ ಜಿಲ್ಲಾವಾರು ಮಾಹಿತಿ ಕೆಳಕಂಡಂತಿರುತ್ತದೆ -

ಜಿಲ್ಲೆಯ ಹೆಸರು	ವಿತರಿಸಲಾಗಿರುವ ಶಾಶ್ವತಿಕ ಪಡಿತರ ಚೀಟಿ				
	ಅನ್ನಪೂರ್ಣ	ಅಂತ್ಯೋದಯ	ಅಕ್ಷಯ	ಬಿಪಿಎಲ್	ಒಟ್ಟು
ಬಾಗಲಕೋಟೆ	1708	46702	165503	151628	365541
ಬೆಂಗಳೂರು (ಗ್ರಾ)	2423	34043	252426	155166	444058
ಬೆಂಗಳೂರು (ಪ)	763	13147	146826	163621	324357
ಬೆಳಗಾಂ	0	92825	452598	388660	934083
ಬಳ್ಳಾರಿ	0	65978	168282	204134	438394
ಬೀದರ್	1596	44901	143445	132875	322817
ಬಿಜಾಪುರ	275	55360	162976	155298	373909
ಚಾಮರಾಜ ನಗರ	1038	36035	139125	65699	241897
ಚಿಕ್ಕಮಗಳೂರು	493	23330	132904	102317	259044
ಚಿತ್ರದುರ್ಗ	0	46767	180814	113218	340799
ದ ಕನ್ನಡ	351	15854	133646	187377	337228
ದಾವಣಗೆರೆ	0	53229	176921	175362	405512
ಧಾರವಾಡ	990	32192	165980	150028	349190
ಗದಗ	37	31657	87577	91329	210600
ಗುಲ್ಬರ್ಗಾ	1741	101405	287359	265786	656291
ಹಾಸನ	0	24728	265737	131012	421477
ಹಾವೇರಿ	1253	49597	133501	102469	286820
ಕೊಡಗು	407	5126	74806	54083	134422
ಕೋಲಾರ	4157	65879	299836	233686	603558
ಕೊಪ್ಪಳ	146	41680	91408	110394	243628
ಮಂಡ್ಯ	0	37208	241098	161826	440132
ಮೈಸೂರು	1835	47991	334547	250871	635244
ರಾಯಚೂರು	2343	60279	126486	167229	356337
ಶಿವಮೊಗ್ಗ	1323	40666	167323	159604	368916
ತುಮಕೂರು	1558	53512	346474	208170	609714
ಉಡುಪಿ	391	17855	87352	109220	214818
ಉ ಕನ್ನಡ	624	16714	148929	125071	291338
ಒಟ್ಟು	25452	1154660	5113879	4316133	10610124
ಬೆಂಗಳೂರು ಅ ಪ	0	18769	200961	860287	1080018
ಬೆಂಗಳೂರು ಪಗರ ಸಭೆ	0	2482	72263	117023	191768
ಒಟ್ಟು	25452	1175912	5387103	5293443	11881910

ನಗರ ಮತ್ತು ಗ್ರಾಮೀಣ ಪ್ರದೇಶವಾರು ಮಾಹಿತಿಯು ಅಧಿಕವಾಗಿರುವುದರಿಂದ ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ನೀಡಲಾಗುವುದು

ಇ) ರಾಜ್ಯಾದ್ಯಂತ ಒಟ್ಟು 64 70 ಲಕ್ಷ ಅಹವಾಲುಗಳು ಸ್ವೀಕೃತಗೊಂಡಿದ್ದು ಈಗಾಗಲೇ ಶೇಕಡಾ 80ರಷ್ಟು ಅಹವಾಲುಗಳನ್ನು ಪರಿಶೀಲಿಸಲಾಗಿರುತ್ತದೆ ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಠ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಈ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸುವ ಸಂದರ್ಭದಲ್ಲಿ ಹಲವಾರು ರೀತಿಯ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು ಆ ವೈಕಿ ಎಪಿಎಲ್ ಪಡಿತರ ಚೀಟಿಯನ್ನು ಪಡೆದಿರುವ ಕುಟುಂಬಗಳವರು ಬಿಪಿಎಲ್ ಪಡಿತರ ಚೀಟಿಯನ್ನು ಕೋರಿ, ಸಮೀಕ್ಷೆಯಲ್ಲಿ ತಮ್ಮ ಕುಟುಂಬವನ್ನು ಸಮೀಕ್ಷೆ ಮಾಡಿಲ್ಲವೆಂದು, ವಿತರಿಸಲಾಗಿರುವ ತಾತ್ಕಾಲಿಕ ಪಡಿತರ ಕೂಪನ್‌ನಲ್ಲಿ ಹೆಸರು, ಸಂಬಂಧ ಅದವಾ ವಯಸ್ಸು ಇತ್ಯಾದಿ ಲೋಪದೋಷವಿದೆ ಎಂಬುದಾಗಿ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿರುತ್ತಾರೆ ರಾಜ್ಯಾದ್ಯಂತ ಒಟ್ಟು 64 70 ಲಕ್ಷ ಅಹವಾಲುಗಳು ಸ್ವೀಕೃತಗೊಂಡಿದ್ದು ಈಗಾಗಲೇ ಶೇಕಡಾ 80ರಷ್ಟು ಅಹವಾಲುಗಳನ್ನು ಪರಿಶೀಲಿಸಲಾಗಿರುತ್ತದೆ ಜಿಲ್ಲಾವಾರು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ರಚಿನಲಾಗಿರುವ ಟಾಸ್ಕ್‌ಫೋರ್ಸ್ ಸಮಿತಿಗಳು ಅಂಗೀಕರಿಸಿ ಶಿಫಾರಸ್ಸು ಮಾಡುವ ಅಂಕಿ ಅಂಶಗಳನ್ನಾಧರಿಸಿ ಎಲ್ಲಾ ಪರಿಷ್ಕರಿಸಿದ ಅಹವಾಲುದಾರರಿಗೂ ಅರ್ಹತೆಗನುಗುಣವಾಗಿ ತಾತ್ಕಾಲಿಕ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಉ) ರಾಜ್ಯದಲ್ಲಿನ 5387103 ಬಿಪಿಎಲ್ ಕೂಪನ್‌ದಾರರಿಗೆ ಆಹಾರಧಾನ್ಯದ ಸಹಾಯಧನ ಮೊಬಲಗು ವಾರ್ಷಿಕವಾಗಿ 720 ಕೋಟಿ ರೂ ವೆಚ್ಚವಾಗುತ್ತದೆ

ಊ) ಮನೆ ಮನೆ ಸಮೀಕ್ಷೆ ಕಾರ್ಯದಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದ್ದು ಅವರುಗಳಿಗೆ ಅರ್ಹತೆಗೆ ಅನುಸಾರ ವರ್ಗವಾರು ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗುತ್ತಿದೆ ಅನಂತರ ಶಾಶ್ವತ ಪಡಿತರ ಚೀಟಿಗಳನ್ನು ವಿತರಿಸಲಾಗುವುದು ಈ ಪ್ರಕ್ರಿಯೆಯಲ್ಲಿ ನಕಲಿ ಪಡಿತರ ಚೀಟಿಗಳು ಸ್ವಯಂ ರದ್ದುಗೊಳ್ಳುತ್ತವೆ